# ಬುದ್ಧಲಕ್ಷಣ

ಕಳೆದ ಎರಡು ಸಾವಿರದ ಐನೂರ ಅರುವತ್ತು ವರ್ಷಗಳ ಹಿಂದೆ ಸಮ್ಯಕ್ ಸಂಬುದ್ಧ, ಲೋಕಕ್ಕೆ ಬೆಳಕನ್ನು ನೀಡಿದ. ಅವನು ಸಾರಿದ ತತ್ತ್ವವನ್ನು ಮುಂದಿನವರು ಒಂದೊಂದು ನೆಲೆಗಳಲ್ಲಿ ಬೆಳೆಸಿದರು. ಬುದ್ಧನ ಪ್ರಧಾನ ಲಕ್ಷಣ ಯಾವುದೆಂದು ವಿಚಾರ ಮಾಡಿದಾಗ 'ಕರುಣೆಯೇ ಬುದ್ಧನ ಪ್ರಧಾನ ಲಕ್ಷಣ'ವೆಂದು ತಿಳಿಯುತ್ತದೆ. ಬುದ್ಧಘೋಷರೆಂಬ ಆಚಾರ್ಯರು 'ಸುಮಂಗಲ ವಿಲಾಸಿನೀ' ಎಂಬ ಮಹಾವ್ಯಾಖ್ಯಾನದ ಆದಿಮಂಗಲದಲ್ಲಿ 'ಕರುಣಾಸೀತಲ ಹದಯಂ' ಎಂದು ನುಡಿದಿದ್ದಾರೆ. ಈ ಮಾತಿನ ಜಾಡನ್ನು ಹಿಡಿದು ನಾವು ಮುಂದಕ್ಕೆ ಹೋಗಬೇಕು. ಸಂಸ್ಕೃತದಲ್ಲಿ 'ಅಮರಕೋಶ'ವೆಂಬ ಶಬ್ದಕೋಶವುಂಟು. ಈ ಕೋಶದ ಪ್ರಾರಂಭದಲ್ಲಿ 'ಯಸ್ಯ ಜ್ಞಾನದಯಾ ಸಿಂಧೋಃ...' ಎಂಬ ಮಾತು ಬರುತ್ತದೆ. ಅಲ್ಲಿ ಬರುವ ಮಾತನ್ನು ಹೀಗೆ ಸಂಗ್ರಹಿಸಬಹುದು: 'ಅಗಾಧನೂ ಜ್ಞಾನ ದಯೆಗಳಿಗೆ ಸಮುದ್ರನೂ ಆದ ಯಾರ ಗುಣಗಳು ಪಾಪವಿಲ್ಲದೆ ಇರುವುವೋ ಅಂಥ ಅಕ್ಷಯನೂ ಶ್ರೀಗೋಸ್ಕರವಾಗಿ, ಅಮೃತಕ್ಕೋಸ್ಕರವಾಗಿ – ಎಲೈ ಧೀರರೇ ನಿಮ್ಮಿಂದ ಸೇವಿಸುವಂತಾಗಲಿ' ಎಂದು ಹೇಳಿದ್ದಾನೆ. ಭಗವಂತನಾದ ಬುದ್ಧನು ರಾಗವೇ ಮೊದಲಾದ ಪಾಪಗಳನ್ನು ಕಳೆದುಕೊಂಡು ಮೈತ್ರಿ, ಕ್ಷಾಂತಿ ಮೊದಲಾದ ಬೋಧಿಪಾಕ್ಷಿಕ ಗುಣಗಳನ್ನು ಪಡೆದವನಷ್ಟೆ. ಇಂಥವನನ್ನು ಸೇವಿಸುವುದು ಸುಲಭವಲ್ಲ. ಅದು ಧೀರರಿಗೆ ಮಾತ್ರ ಸಾಧ್ಯ. ಇಂಥ ಅಕ್ಷಯನೂ ಅಗಾಧನೂ ಜ್ಞಾನದಯಾಸಿಂಧುವೂ ಯಾರು? ಅವನೇ ಸಮ್ಯಕ್ ಸಂಬುದ್ಧ.

ಕಳೆದ ಒಂದೂವರೆ ಸಾವಿರ ವರ್ಷಗಳ ಹಿಂದೆ ಇದ್ದ ಅಮರಕೋಶ ರಚಿಸಿದ ಅಮರಸಿಂಹನು ಹೇಳುವ ಮಾತನ್ನು ಒಮ್ಮೆ ಕೇಳೋಣ:

ಸರ್ವಜ್ಞಃ ಸುಗತೋ ಬುದ್ಧೋ ಧರ್ಮರಾಜಸ್ತಥಾಗತಃ/ ಸಮಂತಭದ್ರೋ ಭಗವಾನ್ ಮಾರಜಿಲ್ಲೋಕಜಿಜ್ಜಿನಃ

ಷಡಭಿಜ್ಞೋ ದಶಬಲೋದ್ವಯವಾದೀ ವಿನಾಯಕಃ/ ಮುನೀಂದ್ರಃ ಶ್ರೀಘನಃ ಶಾಸ್ತಾ ಮುನಿಃ ಶಾಕ್ಯಮುನಿಸ್ತುಯಃ

ಸ ಶಾಕ್ಯಸಿಂಹಃ ಸರ್ವಾರ್ಥಸಿದ್ಧಃ ಶೌದ್ಧೋದನಿಶ್ಚ ಸಃ/ ಗೌತಮಶ್ಚಾರ್ಕ ಬಂಧುಶ್ಚ ಮಾಯಾದೇವೀ ಸುತಶ್ಚ ಸಃ

ಸರ್ವಜ್ಞ, ಸುಗತ, ಬುದ್ಧ, ಧರ್ಮರಾಜ, ತಥಾಗತ, ಸಮಂತಭದ್ರ, ಭಗವಾನ್, ಮಾರಜಿತ್, ಲೋಕಜಿತ್, ಜಿನ, ಷಡಭಿಜ್ಞ, ದಶಬಲ, ಅದ್ವಯವಾದೀ, ವಿನಾಯಕ, ಮುನೀಂದ್ರ, ಶ್ರೀಘನ, ಶಾಸ್ತಾ, ಮುನಿ, ಶಾಕ್ಯಮುನಿ–ಎಂಬುವನು ಯಾವಾತನೋ ಆತನೇ ಶಾಕ್ಯಸಿಂಹ. ಆತನೇ ಸರ್ವಾರ್ಥಸಿದ್ಧ ಮತ್ತು ಶೌದ್ಧೋದನಿ, ಗೌತಮನೂ ಅರ್ಕಬಂಧುವೂ ಮಾಯಾದೇವೀಸುತನೂ ಆತನೇ.

ಮೇಲಿನ ಎಲ್ಲಾ ಮಾತಿನ ಅವಯವಾರ್ಥದ ಸ್ವಾರಸ್ಯವನ್ನು ಒಂದೊಂದಾಗಿ ನಾವೀಗ ತಿಳಿಯೋಣ. ಎಲ್ಲವನ್ನು ತಿಳಿದವನು, ಎಲ್ಲ ಗತಿಗಳ ಅರ್ಥವನ್ನು ತಿಳಿದವನು ಆದ್ದರಿಂದ ಆತ ಸರ್ವಜ್ಞ. ಮುಕ್ತಿಯನ್ನು ತಲುಪಿದ ಮೇಲೆ ಮತ್ತೆ ಸಂಸಾರಕ್ಕೆ ಹಿಂದಿರುಗಿ ಬಾರದಂತೆ ಹೋದವನು. ಆದ್ದರಿಂದ ಆತ ಸುಗತ. ಬೋಧಿಯೆಂಬ ಪ್ರಶಸ್ತವಾದ ಬುದ್ಧಿಯನ್ನು ಪಡೆದವನು. ಆದ್ದರಿಂದ ಆತ ಬುದ್ಧ. ಧಮ್ಮಚಕ್ಕ ಪವತ್ತನ (ಧರ್ಮಚಕ್ರ ಪ್ರವರ್ತನ) ಪ್ರವರ್ತಿಸಿದವನು, ಧರ್ಮದಿಂದ ಸತ್ತ್ವಗಳನ್ನು ಉದ್ಧಾರಮಾಡಿ ರಾರಾಜಿಸಿದವನು, ಆದ್ದರಿಂದ ಆತ ಧರ್ಮರಾಜ. ತಥಾ ಎಂಬುದು ಸತ್ಯ, ಅದನ್ನು ಹೋಗಿ ಸೇರಿದವನಾದ್ದರಿಂದ ಆತ ತಥಾಗತ. ಎಲ್ಲ ರೀತಿಯ ಪುಣ್ಯ ಸಾಮಗ್ರಿಗಳಿಂದಲೂ ಜ್ಞಾನಸಾಮಗ್ರಿಗಳಿಂದಲೂ ಭದ್ರನಾದವನು, ಶ್ರೇಷ್ಠನಾದವನು ಆದ್ದರಿಂದ ಅವನು ಸಮಂತಭದ್ರ. ಈಶ್ವರತ್ವ, ಸಮಗ್ರತೆ, ಧರ್ಮ, ಯಶಸ್ಸು, ಶ್ರೀ, ವೈರಾಗ್ಯ ಮತ್ತು ಮೋಕ್ಷ ಇವುಗಳಿಗೆ ಭಗ ಎಂದು ಹೆಸರು. ಇವೆಲ್ಲ ಯಾರಿಗುಂಟೋ ಅವನು ಭಗವಾನ್. ಕಾಮ ಕ್ರೋಧ ಮೊದಲಾದ ಮಾರನನ್ನ ಜಯಿಸಿದ್ದರಿಂದ ಅವನು ಮಾರಜಿತ್. ತಪಸ್ಸಿನಿಂದ ಲೋಕವನ್ನು ಜಯಿಸಿದ್ದರಿಂದ ಲೋಕಜಿತ್. ಭವಗಳನ್ನು ಜಯಿಸಿದವನಾದ್ದರಿಂದ ಅವನು ಜಿನ. ದಿವ್ಯಚಕ್ಷು, ದಿವ್ಯಶ್ರೋತ್ರ, ಪೂರ್ವನಿವಾಸಾನುಸ್ಮೃತಿ, ಪರಚಿತ್ತಜ್ಞಾನ, ಆಸ್ರವಕ್ಷಯ, ಋದ್ಧಿ – ಈ ಆರು ಅಭಿಜ್ಞಾನ ಉಳ್ಳವನು ಯಾರೋ ಅವನು ಷಡಭಿಜ್ಞ. ದಾನ, ಕ್ಷಾಂತಿ, ಶೀಲ, ವೀರ್ಯ, ಧ್ಯಾನ, ಶಾಂತಿ, ಬಲ, ಉಪಾಯ, ಪ್ರಣಿಧಾನ, ಜ್ಞಾನ – ಈ ಹತ್ತು ಬಲಗಳನ್ನು ಉಳ್ಳವನಾದ್ದರಿಂದ ಅವನು ದಶಬಲ. ಅದ್ವಯವೆನಿಸಿದ ನಿರ್ವಾಣವನ್ನು ಹೇಳುವವನು ಆದ್ದರಿಂದ ಅದ್ವಯವಾದಿ. ಇತರರನ್ನು ನಡೆಸುವವನು, ತನ್ನನ್ನು ನಡೆಸುವವರು ಯಾರು ಇಲ್ಲದವನು ಆದ್ದರಿಂದ ವಿನಾಯಕ. ಮುನಿಗಳಲ್ಲಿ ಶ್ರೇಷ್ಠನಾಗಿರುವುದರಿಂದ ಮುನೀಂದ್ರ. ಶ್ರೀ ಎಂದರೆ ಯೋಗವಿಭೂತಿ, ಘನ ಎಂದರೆ ನಿಬಿಡ. ಆದ್ದರಿಂದ ಅವನು ಶ್ರೀಘನ. ಹೀಗೆ ಮಾಡು, ಹೀಗೆ ಮಾಡಬೇಡ ಎಂದು ಹೇಳಿ ನಡೆಸುವವನು ಶಾಸ್ತಾ, ಏಕಾಂತದಲ್ಲಿಯೂ ಮೌನದಲ್ಲಿಯೂ ರಮಿಸುವವನು ಯಾರೋ ಅವನು ಮುನಿ. ಶಾಕ್ಯರ ಕುಲದಲ್ಲಿ ಹುಟ್ಟಿ, ಅಲ್ಲಿಂದ ಪರಿವ್ರಜಿಸಿ ಮುನಿಯಾದವನು ಯಾವಾತನೋ ಅವನು ಶಾಕ್ಯಮುನಿ.

ಇವೆಲ್ಲವೂ ಸಮ್ಯಕ್ ಸಂಬುದ್ಧನು ನಡೆದು ಸಂಪಾದಿಸಿದ ಗುಣವಿಶೇಷಗಳು. ಆ ಗುಣವಿಶೇಷಗಳಿಂದ ಪ್ರಕೀರ್ತಿತನಾದವನು ಗೌತಮಬುದ್ಧ. ಇವನು ಶಾಕ್ಯಕುಲದ ಸಿಂಹ, ಈ ಲೋಕದ ಎಲ್ಲ ಅರ್ಥಗಳನ್ನು ತಿಳಿದವನಾದ್ದರಿಂದ ಸರ್ವಾರ್ಥಸಿದ್ಧನೆಂದು ನಾಮಕರಣ ಆಯಿತು. ಆತನ ತಂದೆ ಶುದ್ಧೋಧನ. ಆದ್ದರಿಂದ ಆತ ಶೌದ್ಧೋದನಿ. ಆತನ ಗೋತ್ರ ಗೌತಮ. ಆತನ ಬಂಧುಗಳಿಂದ ಶಾಕ್ಯರು ಸೂರ್ಯವಂಶದವರಾದ್ದರಿಂದ ಅರ್ಕ. ಆತನ ತಾಯಿ ಮಾಯಾದೇವಿ. ಇಂಥ ಗುಣವಿಶೇಷಗಳಿಂದ ಸಂಪೂಜ್ಯನಾದ ಸಮ್ಯಕ್ ಸಂಬುದ್ಧನ ಗುಣ–ಲಕ್ಷಣಗಳು ನಮ್ಮಲ್ಲಿ ನೆಲೆಸಲೆಂದು ಪ್ರಾರ್ಥಿಸೋಣ. ಅಂಥವನು ನಡೆದ ಹಾದಿಯಲ್ಲಿ ನಾವೂ ನಡೆದು ಸಂಪನ್ನರಾಗೋಣ ಅಲ್ಲವೆ?

■ **ಪುರಂಜೀವಿ**

## ಮಾತೇ ಮುತ್ತು

- ಒಬ್ಬ ವ್ಯಕ್ತಿ ಸೋಮಾರಿಯಾಗುವುದು ಆತ್ಮಹತ್ಯೆಗೆ ಸಮನಾದುದು.
  —ಚೆಸ್ಟರ್ ಫೀಲ್ಡ್
- ನಕ್ಷತ್ರಗಳನ್ನು ನೋಡುವವನು ರಸ್ತೆಯಲ್ಲಿನ ಹಳ್ಳದಲ್ಲಿ ಬೀಳುವನು.
  —ಅಲೆಕ್ಸಾಂಡರ್ ಸ್ಮಿತ್
- ಯಾವುದನ್ನು ಪಡೆಯಕೂಡದೋ ಅದನ್ನೇ ನಾವು ಅತಿಯಾಗಿ ಬಯಸುತ್ತೇವೆ.
  —ವಿಸ್ಸೈರಸ್
- ಅಸೂಯೆ ಅಜ್ಞಾನದ ಕೂಸು.
  —ಹ್ಯಾಜ್ಲಿಟ್
- ದಬ್ಬಾಳಿಕೆ, ಅತ್ಯಾಚಾರಗಳಿಂದ ಯಾವ ರಾಜ್ಯವೂ ಉಳಿದಿಲ್ಲ, ಉಳಿಯುವುದೂ ಇಲ್ಲ. ಇದು ಇತಿಹಾಸ ನಮಗೆ ಕಲಿಸುವ ಪಾಠ.
  —ಮಹಾತ್ಮ ಗಾಂಧಿ
- ಕಲೆಯ ಭೂಮಿಕೆಯಲ್ಲಿ ಮೇಲು ಕೀಳುಗಳಿಲ್ಲ.
  —ಕುವೆಂಪು
- ಕಾಲ ಬಲವಿದ್ದಾಗ ಯಾವ ಕೆಲಸ ಮಾಡುವುದರಿಂದ ಸುಖ ಉಂಟಾಗುವುದೋ ಅದೇ ಕೆಲಸದಿಂದ ಕಾಲ ಬಲವಿಲ್ಲದಾಗ ದುಃಖ ಉಂಟಾಗುವುದು.
  —ಮಹಾಭಾರತ
- ಒಳ್ಳೆಯ ಕನಸುಗಳು ಪುಕ್ಕಟ್ಟೆ ನೋಡಿದ ಸಿನಿಮಾ–ನಾಟಕಗಳಂತೆ.
  —ದ.ರಾ. ಬೇಂದ್ರೆ
- ರೇಗಾಟವನ್ನು ಬಾಂಬಿಗೆ ಹೋಲಿಸಬಹುದು. ರೇಗುವವನು ಇತರರನ್ನೂ ಉರಿಸಿದಂತೆ ತನ್ನನ್ನೂ ಉರಿಸಿಕೊಳ್ಳುತ್ತಾನೆ.
  —ಎ.ಎನ್. ಮೂರ್ತಿರಾವ್
- ಪ್ರತಿಯೊಬ್ಬನು ತನ್ನ ಹಿಂದಿನ ತಪ್ಪುಗಳಿಗೇ ಅನುಭವವೆಂಬ ದೊಡ್ಡ ಹೆಸರನ್ನು ಕೊಡುತ್ತಾನೆ.
  —ಆಸ್ಕರ್ ವೈಲ್ಡ್